International Journal of Kannada Research 2021; 7(4): 31-33




International Journal of Kannada Research
www.kannadajournal.com

**ISSN: 2454–5813**
IJKR 2021; 7(4): 31-33
© 2021 IJKR
www.kannadajournal.com
Received: 27-06-2021
Accepted: 15-08-2021

**ಮಹೇಶ್ ಯು.ಸಿ.**
ಅಸೋಸಿಯೇಟ್ ಪ್ರೊಫೆಸರ್, ಡಿ ಐ..ಎಸ್.ಎಸ್..ಜಿ.ಜಿ .. ಸರ್ಕಾರಿ ಕಾಲೇಜು, ಚಿಕ್ಕಮಗಳೂರು, ಕರ್ನಾಟಕ, ಭಾರತ

**Corresponding Author:**
**ಮಹೇಶ್ ಯು.ಸಿ.**
ಅಸೋಸಿಯೇಟ್ ಪ್ರೊಫೆಸರ್, ಡಿ ಐ..ಎಸ್.ಎಸ್..ಜಿ.ಜಿ .. ಸರ್ಕಾರಿ ಕಾಲೇಜು, ಚಿಕ್ಕಮಗಳೂರು, ಕರ್ನಾಟಕ, ಭಾರತ

# ಡಾ. ಕುಂ. ವೀರಭದ್ರಪ್ಪ – ಬಂಡಾಯ ಚಳವಳಿಯಿಂದ ದೂರ ಆಶಯಕ್ಕೆ ಹತ್ತಿರ

**ಮಹೇಶ್ ಯು.ಸಿ.**

ಕುಂ.ವೀ. ಎಂದೇ ಹೆಸರಾದ ಕುಂ. ವೀರಭದ್ರಪ್ಪನವರು ಬಳ್ಳಾರಿ ಜಿಲ್ಲೆ ಕೂಡ್ಲಿಗಿ ತಾಲ್ಲೂಕಿನ ಕೊಟ್ಟೂರಿನಲ್ಲಿ ಅಕ್ಟೋಬರ್ 1, 1953 ರಲ್ಲಿ ತಂದೆ ಕುಂಬಾರ ಹಾಲಪ್ಪ, ತಾಯಿ ಕೊಟ್ರಮ್ಮನವರ ಮಗನಾಗಿ ಜನನ. ಆಂಧ್ರ ಪ್ರದೇಶದ ಅನೇಕ ಹಳ್ಳಿಗಳಲ್ಲಿ ಸುಮಾರು 35 ವರ್ಷಗಳ ಕಾಲ ಪ್ರಾಥಮಿಕ ಶಾಲಾ ಶಿಕ್ಷಕರಾಗಿ ಸೇವೆ ಸಲ್ಲಿಸಿ ನಿವೃತ್ತರಾಗಿ ವಿಶ್ರಾಂತ ಜೀವನ ಸಾಗಿಸುತ್ತಿದ್ದಾರೆ. ಗ್ರಾಮೀಣ ಬದುಕಿನ ಸಂವೇದನೆಗಳನ್ನು ತಮ್ಮ ಕೃತಿಗಳಲ್ಲಿ ಸಮರ್ಥವಾಗಿ ಬಳಸಿಕೊಂಡಿರುವ ಬರಹಗಾರ. ಇವರು ಬಳಸುವ ಭಾಷೆಯೂ ಕೂಡ ವಿಶಿಷ್ಟವಾದುದು. ಬಿರುಬಿಸಿಲಿನ ನಾಡಾದ ಬಳ್ಳಾರಿ ಪ್ರದೇಶದ ಗಂಡು ಭಾಷೆಯು ಇವರ ಬರಹಕ್ಕೆ ಮತ್ತಷ್ಟು ಶಕ್ತಿ ನೀಡಿವೆ.

ಕುಂ. ವೀ. ಯವರು ಬರವಣಿಗೆಯಲ್ಲಿ ಬಂಡಾಯ ಕಂಡವರು. ಆದರೆ ಬಂಡಾಯ ಚಳವಳಿಗಳಲ್ಲಿ ಸಕ್ರೀಯವಾಗಿ ಭಾಗವಹಿಸಿದವರಲ್ಲ. ಬಂಡಾಯ ಸಾಹಿತ್ಯದ ಎಲ್ಲಾ ಲಕ್ಷಣಗಳೂ ಇವರ ಸಾಹಿತ್ಯ ಕೃತಿಗಳಲ್ಲಿ ಮೂಡಿಬಂದಿವೆ. ಇವರ ಬರವಣಿಗೆಯಲ್ಲಿನ ಎಲ್ಲಾ ಪ್ರಕಾರಗಳನ್ನು ಅಭ್ಯಾಸಿಸಿದರೆ ಪ್ರತ್ಯಕ್ಷವಾದ ಮತ್ತು ಪರೋಕ್ಷವಾದ ಪ್ರತಿರೋಧದ ಲಕ್ಷಣಗಳನ್ನು ಕಾಣಬಹುದು. ಇವರ ಬರವಣಿಗೆಯ ಕಾಲದಲ್ಲೇ ಬಂಡಾಯ ಸಾಹಿತ್ಯ ಮತ್ತು ಚಳವಳಿ ಉತ್ತುಂಗ ಸ್ಥಿತಿಯಲ್ಲಿತ್ತು. ಅಪಮಾನಗಳನ್ನು, ಅವಮಾನಗಳನ್ನು, ದೌರ್ಜನ್ಯವನ್ನು ನೇರವಾಗಿ ಕಂಡುಂಡ ಇವರು ಅದನ್ನು ಸಾಹಿತ್ಯದ ಮೂಲಕ ವ್ಯಕ್ತಪಡಿಸಿದರೇ ವಿನಾಃ ನೇರವಾಗಿ ಬಂಡಾಯ ಚಳುವಳಿಗಳಲ್ಲಿ ಭಾಗಿಯಾಗಲಿಲ್ಲ. ಸರ್ಕಾರಿ ಶಾಲೆಯ ಶಿಕ್ಷಕರಾಗಿದ್ದದ್ದು ಕಾರಣವಿರಬಹುದು. ಆದರೆ ಬರವಣಿಯಲ್ಲಿ ಅರಣ್ಯ ಇಲಾಖಾ ನೌಕರರ ಲೋಪದೋಷಗಳನ್ನು, ರಾಜಕೀಯ ನಾಯಕರ ರಾಜಕೀಯ ಮೇಲಾಟಗಳನ್ನು, ಧರ್ಮದ ಹೆಸರಿನಲ್ಲಿ ನಡೆಯುವ ಧಾರ್ಮಿಕ ಆಚರಣೆಗಳನ್ನು ಸಮಾಜಕ್ಕೆ ತೆರೆದಿಟ್ಟು ಸಾಹಿತ್ಯದ ಮೂಲಕ ತಿಳಿಸಿದರೂ ನೇರವಾಗಿ ಹೋರಾಟದಲ್ಲಿ ಭಾಗಿಯಾಗದೇ ಸಮಾಜಕ್ಕೆ ಎಚ್ಚರಿಕೆ ಸಂದೇಶ ನೀಡಿದವರು. ಬಂಡಾಯ ಚಳವಳಿಯಿಂದ ದೂರ ಆಶಯಕ್ಕೆ ಹತ್ತಿರವಾದವರು.

'ದಿವಿ ಸೀಮೆಯ ಹಾಡು' ಮತ್ತು 'ನೀನಿಲ್ಲದ ಮನೆ' ಕಾವ್ಯಗಳನ್ನು, ನಿಗಿನಿಗಿ ಹಗಲು, ಮಣ್ಣೇ ಮೊದಲು, ಕೂಳೆ, ಬರಿ ಕಥೆಯಲ್ಲೋ ಅಣ್ಣಾ, ಕೂರ್ಮಾವತಾರ, ಡೋಮ ಮತ್ತಿತರ ಕಥೆಗಳು, ಇನ್ನಾದರೂ ಸಾಯಬೇಕು, ಕುಂವೀ ಆಯ್ದ ಕಥೆಗಳು, ಭಗವತಿ ಕಾಡು, ನಿಜಲಿಂಗ, ಅಪೂರ್ವ ಚಿಂತಾಮಣಿ, ಕರಿವೇಮಲ, ಸುಶೀಲೆ ಎಂಬ ನಾಯಿಯೂ ವಾಗಿಲಿ ಎಂಬ ಗ್ರಾಮವೂ, ಎಂಟರ್ ದಿ ಡ್ರಾಗನ್, ಕುಂ,ವೀ ಬರೆದ ಕಥೆಗಳು, ಸೂರ್ಯನ ಕೊಡೆ ಮುಂತಾದ 12 ಕಥಾ ಸಂಕಲನಗಳನ್ನು ತಂದಿದ್ದಾರೆ. ಕಪ್ಪು, ಪಕ್ಷಿಗಳು, ಹನುಮ, ಆಸ್ತಿ, ಬೇಲಿ ಮತ್ತು ಹೊಲ, ಬೇಲಿಯ ಹೂಗಳು, ಹೇಮರೆಡ್ಡಿ ಮಲ್ಲಮನ ಕಥೆಯು, ಕೊಟ್ರ ಹೈಸ್ಕೂಲಿಗೆ ಸೇರಿದ್ದು, ಯಾಪಿಲ್ಲು, ಶ್ಯಾಮಣ್ಣ, ಕೆಂಡದ ಮಳೆ, ಪ್ರೇಮವೆಂಬ ಹೊನ್ನುಡಿ, ಬೇಟೆ, ಪ್ರತಿಧ್ವನಿ, ಏಕಾಂಬರ, ಅರಮನೆ, ಆರೋಹಣ, ನಿಜಲಿಂಗ, ಶ್ವಾನಾವಲಂಬನಕರಿ, ಕತ್ತೆಗೊಂದು ಕಾಲ, ಜೈ ಬಜರಂಗ ಬಲಿ ಮುಂತಾದ ಕಾದಂಬರಿಗಳು, ಚಾಪ್ಲಿನ್, ರಾಹುಲ ಸಾಂಕೃತ್ಯಾಯನ, ನೇತಾಜಿ ಸುಭಾಷ್ಚಂದ್ರಬೋಸ್, ಸುಭದ್ರಮ್ಮ ಮನ್ಸೂರ್, ಶ್ರೀಕೃಷ್ಣದೇವರಾಯ, ರಾಯಲ ಸೀಮಾ ಜೀವನ ಚರಿತ್ರೆಗಳು, ಚಿನ್ನದತೆನೆ, ತೆಲುಗು ಕಥೆ, ಒಂದು ಪೀಳಿಗೆಯ ತೆಲುಗು ಕಥೆಗಳು, ತನ್ನ ಮಾರ್ಗ(ಅಬ್ಬೂರಿ ಛಾಯಾದೇವಿ ಕತೆಗಳು), ಕಾಲಪುರುಷನ ಹೆಜ್ಜೆ ಗುರುತು ಮುಂತಾದ ಅನುವಾದ ಸಾಹಿತ್ಯ, ಜಮೀನ್ದಾರಿ ವ್ಯವಸ್ಥೆ ಮತ್ತು ತೆಲುಗು ಸಾಹಿತ್ಯ ವಿಮರ್ಶಾ ಕೃತಿ, 'ಗಾಂಧಿಕ್ಲಾಸು' ಎಂಬ ಆತ್ಮ ಚರಿತ್ರೆ ರಚಿಸಿದ್ದಾರೆ. ಎಪಿಕ್ ಶೈಲಿಲಿ ಬರೆದು 'ಚಾಪ್ಲಿನ್'ನನ್ನು ಕನ್ನಡಿಗರಿಗೆ ಪರಿಚಯಿಸಿದರು. ಇವರ ಕತೆಗಳು ಬೇರೆ ಬೇರೆ ಭಾಷೆಗಳಿಗೆ ಅನುವಾದಗೊಂಡಿವೆ. ಕಳೆದೈವತ್ತು ವರ್ಷಗಳಲ್ಲಿ ಐವತ್ತಕ್ಕು ಹೆಚ್ಚು ಮೌಲಿಕ ಕೃತಿಗಳನ್ನು ಪ್ರಕಟಿಸಿದ್ದರೂ ಈ ದಣಿವರಿಯದ ಲೇಖಕ ಸಾಹಿತ್ಯ ಕೃಷಿಯನ್ನು ಮುಂದುವರಿಸಿರುವರು. ಇತ್ತೀಚೆಗೆ ತಮ್ಮ ವಿನೂತನ ಕಾದಂಬರಿ 'ಎಲ್ಲೋ ಜೋಗಪ್ಪ ನಿನ್ನರಮನೆ' ರಚಿಸಿದ್ದಾರೆ. ಮಾಂತ್ರಿಕ ವಾಸ್ತವ ಕಥಾನಕದ ಹಂದರವಿರುವ ಇದು ವಿಭಿನ್ನ ಹಾಗೂ ಆಕರ್ಷಕ ಶೈಲಿಯಲ್ಲಿದೆ.

ಕರ್ನಾಟಕ ಸಾಹಿತ್ಯ ಅಕಾಡೆಮಿ, ಅನುವಾದ ಅಕಾಡೆಮಿ, ಚಲನಚಿತ್ರ ಸಬ್ಸಿಡಿ ಸಮಿತಿಗಳ ಸದಸ್ಯರು ಸಹ ಆಗಿದ್ದರು. ತುಮಕೂರಿನ ವೀಚಿ ಪ್ರತಿಷ್ಠಾನ ಪ್ರಶಸ್ತಿ, ರಾಣೆಬೆನ್ನೂರು ಲದ್ವಾ ಪ್ರತಿಷ್ಠಾನ ಪ್ರಶಸ್ತಿ, ಕರ್ನಾಟಕ ವಿಶ್ವವಿದ್ಯಾಲಯದಿಂದ ಗೌರವ ಡಾಕ್ಟರೇಟ್ ಪ್ರಶಸ್ತಿ, ಸಂದೇಶ ಪ್ರಶಸ್ತಿ, ಗೌರೀಶ್ ಕಾಯ್ಕಿಣಿ ಪ್ರತಿಷ್ಠಾನ ಪ್ರಶಸ್ತಿ, ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಮತ್ತು ಬಹುಮಾನ, ವರ್ಧಮಾನ ಪ್ರಶಸ್ತಿ, ಲಂಕೇಶ ಪ್ರತಿಷ್ಠಾನ ಪ್ರಶಸ್ತಿ, ಧಾರವಾಡದ ಬೆಟಗೇರಿ ಕೃಷ್ಣಶರ್ಮ ಕಾದಂಬರಿ ಪ್ರಶಸ್ತಿ, ಪ್ರೊ. ಕೆ.ಜಿ. ಕುಂದಣಗಾರ ಗಡಿನಾಡ ಸಾಹಿತ್ಯ ಪ್ರಶಸ್ತಿ, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ಮತ್ತು ನೃಪತುಂಗ ಪ್ರಶಸ್ತಿಗಳು ಲಭಿಸಿವೆ. ಹಲವಾರು ಸಂಘ ಸಂಸ್ಥೆಗಳು ಇವರಿಗೆ ಹತ್ತಾರು ಪ್ರಶಸ್ತಿಗಳನ್ನು ನೀಡಿ ಗೌರವಿಸಿವೆ.

ಬೇಲಿ ಮತ್ತು ಹೊಲ ಕಿರುಕಾದಂಬರಿಯ ಮೂಲಕ ಕನ್ನಡ ಸಾಹಿತ್ಯದ ಶಿಷ್ಟ ಪರಂಪರೆಯ ಬೇಲಿಗಳನ್ನು ಜಿಗಿದ ಕುಂ. ವೀರಭದ್ರಪ್ಪ ಅವರು ಓದುಗರನ್ನು ಆಕರ್ಷಿಸಿದ್ದು ತಮ್ಮ ವಿಶಿಷ್ಟ ಭಾಷಾ ಪ್ರಯೋಗ ಮತ್ತು ನುಡಿಗಟ್ಟುಗಳಿಂದ. ಅವರ ಕತೆಗಳಲ್ಲಿ, ಕಾದಂಬರಿಗಳಲ್ಲಿ ಕಾಣಿಸಿಕೊಂಡ ವಿಶೇಷವಾದ ಭಾಷಾ ಪ್ರಯೋಗ ಸಾಹಿತ್ಯದಲ್ಲೊಂದು ಪ್ರತ್ಯೇಕ ಸ್ಥಾನ ಕಲ್ಪಿಸಿಕೊಟ್ಟಿತು. ಎಲುಬನೆಂಬ ಕೊರಚನೂ ಚವುಡನೆಂಬ ಹಂದಿಯೂ, ಕತ್ತಲನೂ ತ್ರಿಶೂಲ ಹಿಡಿದ ಕತೆ, ದೇವರ ಹೆಣ, ಕಿವುಡ ನಾಯಿಯಾದ ಪ್ರಸಂಗಗಳ ಮೂಲಕ ಸಣ್ಣ ಕತೆಗಳ ದಿಕ್ಕನ್ನು ಬದಲಾಯಿಸಿದವರು. ಕುಂ.ವೀ ಎಂದೇ ಜನಪ್ರಿಯರಾಗಿರುವ ಕುಂ.ವೀರಭದ್ರಪ್ಪನವರು ಸಾಹಿತ್ಯ ಚಳವಳಿಯಿಂದ ದೂರ ಉಳಿದು ಬಂಡಾಯ ಸಾಹಿತ್ಯದಲ್ಲಿ ತಮ್ಮನ್ನು ಸಕ್ರಿಯವಾಗಿ ತೊಡಗಿಸಿಕೊಂಡವರು. ಕೃತಿಗಳಲ್ಲಿ ಬಂಡಾಯದ ಸ್ಪಷ್ಟ ಅಂಶಗಳಿದ್ದರೂ ನೇರವಾಗಿ ಬಂಡಾಯ ಎಂದು ಹೇಳಿಕೊಳ್ಳದೆ ಸಾಹಿತ್ಯ ರಚಿಸಿದವರು.

ಕುಂ.ವೀ. ಬಹು ಜನಪ್ರಿಯ ಲೇಖಕರಲ್ಲಿ ಒಬ್ಬರು. ಇವರ 'ಬೇಟೆ' ಕಾದಂಬರಿ ಆಧಾರಿತ ಸಿನಿಮಾ ಮನಮೆಚ್ಚಿದ ಹುಡುಗಿ, ಬೇಲಿಯ ಹೂಗಳು ಆಧರಿತ ದೊರೆ ಸಿನಿಮಾ, ಕೋಟ್ರೇಶಿಯ ಕನಸು, ಕೆಂಡದ ಮಳೆ, ಕೂರ್ಮಾವತಾರ ಭಗವತಿ ಕಾಡು, ಬೇಲಿ ಮತ್ತು ಹೊಲ ಎಂಬವು ಸಿನಿಮಗಳಾಗಿರುವುದು ಸಾಕ್ಷಿಯಾಗಿದೆ. ಗಿರೀಶ್ ಕಾಸರವಳ್ಳಿ ನಿರ್ದೇಶನದ ಕೂರ್ಮಾವತಾರ ಸಿನಿಮಾಕ್ಕೆ ರಾಷ್ಟ್ರ ಮಟ್ಟದ ಪ್ರಶಸ್ತಿ ಲಭ್ಯವಾಗಿದೆ. 'ಚೋಟ್ಟಿಲು' ಕಾದಂಬರಿಗೆ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, 'ಅರಮನೆ' ಕಾದಂಬರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿದೆ. 'ಕಪ್ಪು' ಕಥಾ ಸಂಕಲನ ಆ ಕಾಲಕ್ಕೆ ಹೆಚ್ಚು ಮಾರಾಟ ಕಂಡ ಕಥಾ ಪುಸ್ತಕವಾಗಿದೆ. ಮೊದಲು ಸೃಜನಶೀಲ ಸಾಹಿತ್ಯ ರಚಿಸುತ್ತಿದ್ದವರು ಕ್ರಮೇಣ ಸೃಜನೇತರ ಸಾಹಿತ್ಯ ಪ್ರಕಾರದ ಕಡೆ ಹೊರಳಿದ್ದಾರೆ. ಇವರು ಬರೆದ 'ಭಳಾರೆ ವಿಚಿತ್ರಂ' ಒಂದು ಜ್ಞಾಪಕ ಚಿತ್ರಶಾಲೆಯೇ ಆಗಿದೆ.

ಕನ್ನಡದ ಸಣ್ಣ ಕಥೆಯ ಭಾಷೆಗೆ ಹೊಸ ಮೊನಚು ಕೊಟ್ಟ ಕುಂ.ವೀ ಅವರ ಭಾಷಾ ಶೈಲಿ ಒಂದು ಕಾಲಕ್ಕೆ ಎಷ್ಟು ಜನಪ್ರಿಯವಾಗಿತ್ತೆಂದರೆ ಅದೇ ಭಾಷೆ, ನಿರೂಪಣಾ ಶೈಲಿ ಮತ್ತು ವಸ್ತುಗಳನ್ನು ಇಟ್ಟುಕೊಂಡು ಬರೆಯುವ ಲೇಖಕರ ದೊಡ್ಡ ದಂಡೇ ಹುಟ್ಟಿಕೊಂಡಿತ್ತು. ಕನ್ನಡ ಗದ್ಯದ ಪರಿಭಾಷೆಯನ್ನು ಬದಲಾಯಿಸಿದರು. ಅಲ್ಲದೆ ಅಂಕಣಕಾರರಾಗಿಯೂ ಪ್ರಸಿದ್ಧರಾಗಿದ್ದಾರೆ.

ಕುಂ.ವೀ. ಎಂದು ನೆನೆದಾಗ ಗೋಚರಿಸುವುದು ಜಮೀನ್ದಾರಿ ಪದ್ಧತಿಯ ಗತ್ತು, ಅಹಂಕಾರ, ದರ್ಪ, ಅಟ್ಟಹಾಸ ಇವುಗಳಿಗೆ ಸಿಕ್ಕಿ ನಲುಗುವ ಕೆಳವರ್ಗದ ಜನತೆಯ ಅಸಹಾಯಕತೆ, ರಕ್ತಸಿಕ್ತ ಬದುಕಿನ ಪುಟಗಳ ಅನಾವರಣ. ಇವರ ಕತೆ ಕಾದಂಬರಿಗಳಲ್ಲಿ ಬಳಸಿರುವ ಬಳ್ಳಾರಿ ಪ್ರದೇಶದ ಸೊಗಡಿನ ಭಾಷೆ. ತಂದೆಯವರು ಹೇಳುತ್ತಿದ್ದ ಸುಳ್ಳಿನ ಕಥೆಗಳನ್ನು ಅತಿರಂಜನೀಯವಾಗಿ ವ್ಯಾಖ್ಯಾನಿಸುತ್ತಿದ್ದುದ್ದನ್ನು ಕೇಳಿ ಇವರ ಮನಸ್ಸಿನಲ್ಲಿ ತಾನೂ ಒಬ್ಬ ಕತೆಗಾರನಾಗಬೇಕೆಂಬ ಹಂಬಲಕ್ಕೆ ಸಾಕ್ಷಿಯಾಯಿತು. ಪ್ರಾಥಮಿಕ ಶಾಲೆಯಲ್ಲಿರುವಾಗಲೇ ಇವರು ಹೇಳುತ್ತಿದ್ದ ಕತಾಶೈಲಿ ರಂಜನೀಯವಾಗಿರುತ್ತಿದ್ದವು. ಇವರು ಬಳಸಿರುವ ಭಾಷಾ ಶೈಲಿ ಪ್ರಮುಖವಾದುದು. ನಗರ ಪ್ರದೇಶದ ಭಾಷೆ ಕೃತಕವಾದುದು, ಹಳ್ಳಿಗಾಡಿನ ಭಾಷೆ ಜೀವಂತ ಭಾಷೆ, ಹಳ್ಳಿಗಳೇ ಸಾಹಿತ್ಯದ ಶಕ್ತಿಕೇಂದ್ರಗಳು, ಹಳ್ಳಿಯ ಬದುಕಿನ ಚಿತ್ರಣವೇ ಇವರ ಸಾಹಿತ್ಯದ ಸತ್ವ. ಹಳ್ಳಿಗಳಲ್ಲಿನ ಸಾಮಾಜಿಕ, ರಾಜಕೀಯ ಸ್ಥಿತ್ಯಂತರಗಳನ್ನು, ಸಂಘರ್ಷಗಳನ್ನು ಕತೆ ಕಾದಂಬರಿಗಳ ಮೂಲಕ ಚಿತ್ರಿಸಿದ್ದಾರೆ. ಇವರ ಬರಹವು ಪ್ರಾದೇಶಿಕ ಮತ್ತು ಜನಾಂಗೀಯ ಭಾಷೆಯ ಸೊಗಡಿನಿಂದ ಕೂಡಿದ್ದು ಗ್ರಾಮೀಣ ಬದುಕಿನ ಒಳಪದರುಗಳಲ್ಲಿ ಹರಡಿರುವ ಸಾಂಸ್ಕೃತಿಕ ನೆಲೆಗಳ ಚಿತ್ರಣಗಳನ್ನು ಯಥಾವತ್ತಾಗಿ ಮೂಡಿಸಿದ್ದಾರೆ. ಇವರು ಟಿ,ಸಿ,ಎಚ್. ಶಿಕ್ಷಣ ಓದುತ್ತಿರುವಾಗಲೇ ಬರೆದ 'ಬಲಿ' ಎಂಬ ಕತೆ ತಮ್ಮೂರಿನ ಜಾತ್ರೆಯಲ್ಲಿ ನಡೆಯುತ್ತಿದ್ದ ಪ್ರಾಣಿಬಲಿ ಕುರಿತು ಬರೆದ ಕತೆಯಾಗಿದ್ದು ಈ ಕತೆ ಬಳ್ಳಾರಿ ಜಿಲ್ಲೆಯ ಕಥಾಸಂಕಲನದಲ್ಲಿ ಸೇರ್ಪಡೆಯಾಗಿದೆ. ಕಾಡಿನ ಅವ್ಯವಹಾರ ಗೊಂದಲಗಳ ಬಗ್ಗೆ ಬರೆದ ಕತೆ 'ಗಾಡ', ಫಾರೆಸ್ಟ್ ಅಧಿಕಾರಿಗಳ ವೃತ್ತಿಗೆ ಸಂಚಾಕಾರ ತರುವಷ್ಟು ಪ್ರಬಲ ಪರಿಣಾಮ ಬೀರಿದ ಕತೆಯಾಗಿತ್ತು. ಯಾರ ಒತ್ತಾಯಕ್ಕೂ ಮಣಿಯದೇ ತಾನು ಬರೆದದ್ದೇ ಸರಿ ಎಂದು ವಾದಿಸಿ ಪ್ರತಿಭಟನೆ, ಪ್ರತಿರೋಧದ ಮನೋಭಾವವನ್ನು ರೂಢಿಸಿಕೊಂಡವರು.

ದಲಿತ ಜನಾಂಗವು ಮೌನವಾಗಿ ಅನುಭವಿಸುತ್ತಿರುವ ನೋವು, ಹತಾಶೆ, ಕೀಳರಿಮೆ ಇವುಗಳನ್ನು ಯಥಾವತ್ತಾಗಿ ಚಿತ್ರಿಸುತ್ತಾ ಬಂದಿದ್ದು ಹೀಗೆ ಬರೆದ ಕತೆಗಳು ನಾಡಿನ ಬೇರೆ ಬೇರೆ ಪತ್ರಿಕೆಗಳಲ್ಲಿ ಪ್ರಕಟಗೊಂಡಿವೆ.

ಕೊಟ್ರೇಶಿ ಕನಸು ಸಿನಿಮಾಕ್ಕೆ ಅತ್ಯುತ್ತಮ ಪ್ರಾದೇಶಿಕ ಚಲನಚಿತ್ರ ಪ್ರಶಸ್ತಿ, ಕೂರ್ಮಾವತಾರ ಚಿತ್ರಕ್ಕೆ ಕೇಂದ್ರ ಸರ್ಕಾರದ ರಜತ ಕಮಲ ಪ್ರಶಸ್ತಿ, ಕಪ್ಪು ಕಾದಂಬರಿಯ ಸೃಜನಶೀಲ ಬರವಣಿಗೆಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಡೋಮ ಮತ್ತಿತರ ಕಥೆಗಳಿಗೆ ಕನ್ನಡ ಸಾಹಿತ್ಯ ಪರಿಷತ್ ಪ್ರಶಸ್ತಿ, ಶಾಮಣ್ಣ ಕಾದಂಬರಿಗೆ ಹುನುಗುಂದ ಸಾರಂಗ ಮಠ ಪ್ರತಿಷ್ಠಾನ ಪ್ರಶಸ್ತಿ, ಬೇಲಿ ಮತ್ತು ಹೊಲ ಕಾದಂಬರಿಗೆ ವರ್ಧಮಾನ ಉದಯೋನ್ಮುಖ ಪಶಸ್ತಿ, ಅರಮನೆ ಕಾದಂಬರಿಗೆ ಲದ್ವಾ ಮತ್ತು ವೀಚಿ ಪ್ರತಿಷ್ಠಾನ ಪ್ರಶಸ್ತಿ ಲಭಿಸಿವೆ.

ಕುಂ.ವೀ. ಬರಹಗಳು ಓದುತ್ತಾ ಓದುತ್ತಾ ಭಯ ಹುಟ್ಟಿಸಿದಂತೆ ಕಾಣಿಸಿದರೂ ಕಥೆ ಮುಗಿಯುವಷ್ಟರಲ್ಲಿ ನಮ್ಮನ್ನು ಸೆಳೆದುಕೊಂಡು ಬಿಟ್ಟಿರುತ್ತವೆ. ಕರ್ನಾಟಕ ಆಂಧ್ರ ಗಡಿ ಭಾಗವಾದ ಬಳ್ಳಾರಿ ಜಿಲ್ಲೆಗಳ ಬದುಕನ್ನು ಕಣ್ಣಿಗೆ ಕಟ್ಟುವಂತೆ ಚಿತ್ರಿಸಿದ್ದಾರೆ. ಅಲ್ಲಿಯ ನಕ್ಸಲೀಯರು ಸದಾ ಹತ್ತನ್ನೆರಡು ಗನ್‌ಮ್ಯಾನ್‌ಗಳ ಮಧ್ಯದಲ್ಲಿ ಬದುಕುವ ಜಮೀನ್ದಾರರು, ಅಮಾಯಕ ಸಾಮಾನ್ಯ ಜನತೆ– ಇವರು ಹೀಗೆಲ್ಲಾ ಬದುಕಲು ಸಾಧ್ಯವೇ ಎಂದು ಜನರು ಅಚ್ಚರಿಪಡುವಷ್ಟು ಅಪರಿಚಿತ ಬದುಕನ್ನು ನಮ್ಮ ಮುಂದಿಡುತ್ತಾರೆ. ಅಲ್ಲಿಯ ಎರೆಮಣ್ಣು ಮಳೆಗಿಂತ ರಕ್ತದಲ್ಲಿಯೇ ಹೆಚ್ಚು ನೆನೆದಂತೆ ಚಿತ್ರಿಸುವ ಇವರ ಬರವಣಿಗೆ ಮುಖ್ಯವಾಗಿದೆ. ಮೂರು ದಶಕಗಳಿಗೂ ಮೀರಿದ ವೃತ್ತಿ ಬದುಕಿನಲ್ಲಿ ಕಾರ್ಯ ನಿರ್ವಹಿಸಿದ ಕುಗ್ರಾಮಗಳ ಜನರ ಬದುಕಿನ ಬಗ್ಗೆ ಬರೆಯುವುದು ಇವರ ಕಾರ್ಯವಾಗಿದೆ.

ವಿಶೇಷವಾಗಿ ಕುಂ.ವೀ. ತೆಲುಗು ವಿಪ್ಲವ ಸಾಹಿತ್ಯದ ಪ್ರಭಾವಕ್ಕೆ ಒಳಗಾಗಿದ್ದಾರೆ. ಆದ್ದರಿಂದ ಅವರ ಬರೆವಣಿಗೆಯಲ್ಲಿ ಮೇಲ್ಜಾತಿ ಮತ್ತು ಮೇಲ್ವರ್ಗದವರು ಕೆಳಜಾತಿ ಮತ್ತು ಕೆಳವರ್ಗದವರ ಮೇಲೆ ಶೋಷಣೆ ದೌರ್ಜನ್ಯವನ್ನು ನಡೆಸುತ್ತಿರುವ ಭೀಕರ ಚಿತ್ರಣಗಳನ್ನು ಅಧಿಕಾರಶಾಹಿಯ ಅಟ್ಟಹಾಸಗಳನ್ನು ಕಾಣಬಹುದು. ಜಮೀನ್ದಾರಿ ಪದ್ಧತಿ, ಬಂಡವಾಳಶಾಹಿ ಮತ್ತು ಪುರೋಹಿತಶಾಹಿ ವ್ಯವಸ್ಥೆಗಳ ಭೀಕರ ಕ್ರೌರ್ಯ, ಭ್ರಷ್ಟಾಚಾರಗಳು ಕುಂ.ವೀ. ಅವರ ಕಥಾ ಸಾಹಿತ್ಯದ ವಸ್ತುಗಳಾಗಿವೆ. ಹಸಿವಿನ ಚಿತ್ರಣವಂತೂ ಹಸಿದವರ ಹೊಟ್ಟೆಯ ಒಳಹೊಕ್ಕು ಚಿತ್ರಿಸಿರುವಂತೆ ಮೈನವಿರೇಳಿಸುವ ಅನುಭವ ಕೊಡುತ್ತವೆ. ಇವೆಲ್ಲವುಗಳನ್ನು ಅತ್ಯಂತ ಸಮೀಪದಿಂದ ನೋಡಿ ಅನುಭವಿಸುವುದರಿಂದ ಸಾಹಿತ್ಯದಲ್ಲಿ ಅಧಿಕೃತವಾಗಿ ಸೆರೆಹಿಡಿದಿದ್ದಾರೆ. ಈ ರೀತಿಯ ಬರೆವಣಿಗೆಯ ಶೈಲಿಯೂ ಇತರ ಬಂಡಾಯ ಬರೆಹಗಾರರಿಂದ ಕುಂ.ವೀ. ಅವರನ್ನು ಪ್ರತ್ಯೇಕಿಸಿದೆ ಹಾಗೂ ತನ್ನತನವನ್ನು ಉಳಿಸಿಕೊಟ್ಟಿದೆ. ಕನ್ನಡ ಬಂಡಾಯ ಸಾಹಿತ್ಯದ ಒಟ್ಟಾರೆ ಚೌಕಟ್ಟನ್ನು ವಿಸ್ತರಿಸಿ ಸಾಣೆ ಹಿಡಿಯುವ ಕೆಲಸವನ್ನು ತೆಲುಗು ವಿಪ್ಲವ ಸಾಹಿತ್ಯ ಮಾಡಿದೆ.

ಬಂಡಾಯ ಸಾಹಿತ್ಯದ ಅನನ್ಯವಾದ ಅನುಭವಲೋಕ, ಅಭಿವ್ಯಕ್ತಿ ವಿಧಾನ ಹಾಗೂ ತಾತ್ವಿಕತೆಯನ್ನು ಪರಿಚಯ ಮಾಡಿಕೊಟ್ಟಿರುವ ಮಹತ್ವದ ಲೇಖಕರು. ಅವರ ಬಹುಪಾಲು ನೆಲೆಯಾದ ವಿಷಾದ ಮತ್ತು ಅಸಹಾಕತೆಗಳು ನಮ್ಮ ನಾಡಿನ ಗ್ರಾಮೀಣ ಸಮುದಾಯಗಳ ಶಾಶ್ವತ ಸ್ಥಿತಿಯೇ ಆಗಿದೆ. ಅವರ ಬರವಣಿಗೆಯು ನಮ್ಮ ಮನಸ್ಸಿನ ಮೇಲು ನೆಲೆಗಳನ್ನು ನಗಿಸುತ್ತಲೇ ಹೆಚ್ಚು

ಸಂವೇದನಾಶೀಲವಾದ ಒಳನೆಲೆಗಳನ್ನು ವ್ಯಾಕುಲಗೊಳಿಸುವ ಸಾಮಾರ್ಥ್ಯವನ್ನು ಪಡೆದಿದೆ. ಇವರ ಕಥೆಗಳಲ್ಲಿನ ವೈಶಿಷ್ಟ್ಯವೆಂದರೆ ಅವು ಒಳಗೊಳ್ಳುವ ಮಧ್ಯಮ ವರ್ಗದ ಓದುಗನಿಗೆ ಅಷ್ಟಾಗಿ ಪರಿಚಯವಿಲ್ಲದ ಅವರನ್ನು ಬೆಚ್ಚಿ ಬೀಳಿಸಬಲ್ಲ ಕೆಳವರ್ಗದ ಜೀವನ ಪ್ರಪಂಚ, ಬಳ್ಳಾರಿ ಜಿಲ್ಲೆಯ ದೇಸಿ ನುಡಿಗಟ್ಟಿನ ಬಳಕೆ ಪ್ರಮುಖವಾಗಿದೆ.

ಕುಂ.ವೀ. ಅವರದು ಕಥನಕ್ಕೊಗ್ಗಿದ ಪ್ರತಿಭೆ. ಸಮಾಜದ ನಿರ್ಲಕ್ಷಿತ ಜನರ ಅನುಭವಗಳನ್ನು ಅವರಷ್ಟು ಹತ್ತಿರದಿಂದ ನೋಡಿದವರಲ್ಲಿ ಸಮಕಾಲೀನರಲ್ಲಿ ವಿರಳ. ದಟ್ಟವಾದ ಅನುಭವ, ಸೂಕ್ಷ್ಮ ವಿವರಗಳಿಂದ ಕೂಡಿದ ನಿರೂಪಣೆ, ಭಾಷೆಯ ಮೂಲಕವಾಗಿಯೇ ಪಾತ್ರಗಳನ್ನು ಜೀವಂತಗೊಳಿಸುವ ಕಲೆ ಇವುಗಳಿಂದಾಗಿ ಕುಂ.ವೀ. ನಮ್ಮ ಮಹತ್ವದ ಕಥೆಗಾರರಲ್ಲಿ ಒಬ್ಬರಾಗಿದ್ದಾರೆ. ಇವರ ಬರವಣಿಗೆಯಲ್ಲಿ ಮನಸ್ಸನ್ನು ಹೊಕ್ಕು ತುಂಬಿಕೊಳ್ಳುವ ಗುಣವಿದೆ. ಕನ್ನಡ ಕಥೆಗಳ ಕಾಮನಬಿಲ್ಲಿನಲ್ಲಿ ಕುಂ.ವೀ.ಯವರ ಬರವಣಿಗೆಯದ್ದೇ ಒಂದು ಪ್ರತ್ಯೇಕ ಬಣ್ಣ. ಅದರ ಒಂದು ತುದಿಯಲ್ಲಿ ಇವರ ಬರವಣಿಗೆಯ ಬಣ್ಣ ಕಾಣುತ್ತದೆ.

ಸಾಹಿತಿಗಳಿಂದ ಪ್ರಶಸ್ತಿ ವಾಪಸ್ ನ ಯೋಜನೆಯಂತೆ ಡಾ. ಎಂ. ಎಂ. ಕಲ್ಬುರ್ಗಿ ಅವರ ಹತ್ಯೆಯನ್ನು ಖಂಡಿಸಿ ಅರಮನೆ ಕಾದಂಬರಿಗೆ ನೀಡಿದ್ದ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಯನ್ನು ವಾಪಾಸ್ ನೀಡಿದರು. ಗೌರಿ ಲಂಕೇಶ್ ರವರ ಹತ್ಯೆಯನ್ನು ವಿರೋಧಿಸಿ ‘‘ಪ್ರಜಾಪ್ರಭುತ್ವವನ್ನು ರಕ್ಷಿಸಿ’’ ಎಂದು ಹೇಳಿಕೆ ನೀಡಿದ್ದರು.

**ಪರಾಮರ್ಶನ ಗ್ರಂಥಗಳು:**


1. ಕಥೆ ಅಂದರೆ ಅಷ್ಟೆ ಸಾಕೆ – ಕುಂ.ವೀ ಯವರ ಸಮಗ್ರ ಕಥೆಗಳು.
2. ರಾಯಲ ಸೀಮಾ – ಕುಂ.ವೀ ಯವರ ಆತ್ಮಕಥನದ ತುಣುಕುಗಳು
3. ಅರುಹು ಕುರುಹು – ಕನ್ನಡ ತ್ರೈಮಾಸಿಕ ಪತ್ರಿಕೆ
4. ಎಲ್ಲೋ ಜೋಗಪ್ಪ ನಿನ್ನರಮನೆ – ಕುಂ.ವೀ.ಯವರ ಮಾಂತ್ರಿಕ ವಾಸ್ತವ ಕಥಾನಕ
5. ಅಂತರ್ ಜಾಲ ಮಾಹಿತಿ